## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 773/2024

**ಸಾಕ್ಷಿಯನ್ನು ದಿಃ 03.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಜಯರಾಮು | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 8 |
| ತಂದೆಯ ಹೆಸರು | ಹೊಸೂರಯ್ಯ | | |
| ವಯಸ್ಸು | 56 ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ರಂಗನಾಥ ಬಡಾವಣೆ. | | |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನನಗೆ ಚಾಸಾ-1 ರಿಂದ 3 ಗೊತ್ತು. ಆರೋಪಿತರು ಗೊತ್ತು. ಆರೋಪಿತರು ಮತ್ತು ಚಾಸಾ-1 ರಿಂದ 3 ರವರ ನಡುವೆ ಏನಾಗಿದೆ ಎಂದು ಗೊತ್ತಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡಿಲ್ಲ ಮತ್ತು ಗಲಾಟೆ ಬಿಡಿಸಿಲ್ಲ. ಆರೋಪಿತರು ಚಾಸಾ-1 ರಿಂದ 3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದನ್ನು , ಅಡ್ಡಗಟ್ಟಿ ತಡೆದಿರುವುದನ್ನು , ಕೈಗಳಿಂದ ಒಡೆದಿರುವುದನ್ನು , ಕೊಲೆ ಬೆದರಿಕೆ ಹಾಕಿರುವುದನ್ನು ನಾನು ನೋಡಿಲ್ಲ. ನಾನು ಘಟನೆಗೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

### ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

ದಿನಾಂಕಃ 02.12.2023 ರಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಚಾಸಾ-1 ರವರ ಮನೆಯ ಮುಂದೆ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ಚಾಸಾ-2 ರವರಿಗೆ 1ನೇ ಆರೋಪಿಯು ಏನು ಬೋಳಿಮಗನೇ ನನ್ನ ಮೇಲೆ ಗಲಾಟೆ ಮಾಡುತ್ತಿದ್ದೆಯಲ್ಲಾ ಈಗ ಬಾ ನೋಡೋಣವೆಂದು ಅವಾಚ್ಯ ಶಬ್ದಗಳಿಂದ ಬೈದು , ಜಗಳಕ್ಕೆ ಕರೆಯುತ್ತಿದ್ದಾಗ ಚಾಸಾ-1 ರವರು ಬಂದು 1ನೇ ಆರೋಪಿಯ ಬಳಿ ಈಗೆಲ್ಲಾ ಮಾತನಾಡಬೇಡ ಏನಾದರು ಇದ್ದರೆ ನ್ಯಾಯ ಪಂಚಾಯಿತಿ ಮಾಡೋಣ ಎಂದು ಹೇಳಿದಾಗ 1ನೇ ಆರೋಪಿಯು ಚಾಸಾ-1 ರವರಿಗೆ ಸೂಳೇ ಬಡ್ಡಿ ನಿನ್ನ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳಲು ಆಗುವುದಿಲ್ಲ ನನಗೆ ಬುದ್ಧಿ ಹೇಳಲು ಬರುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆಗ 2 ಮತ್ತು 3ನೇ ಆರೋಪಿತರು ಬಂದು ಚಾಸಾ-1 ರವರ ಮುಂದಲೆಯನ್ನು ಹಿಡಿದು ಅವರನ್ನು ತಡೆದು ನಿಲ್ಲಿಸಿ ಕೈಗಳಿಂದ ಮೈ ಕೈ ,

ಹೊಟ್ಟೆ, ತೊಡೆ ಭಾಗಕ್ಕೆ ಒಡೆದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ-3 ರವರು ಜಗಳ ಬಿಡಿಸಿ ಸಮಾಧಾನ ಮಾಡಿದೆವು ಎಂದರೆ ಸರಿಯಲ್ಲ. ಆಗ ಆರೋಪಿತರು ಮತ್ತೊಮ್ಮೆ ನಮ್ಮ ತಂಟೆಗೆ ಬಂದರೆ ಕೊಲೆ ಮಾಡುವುದಾಗಿ ಚಾಸಾ-1 ಮತ್ತು 2 ರವರಿಗೆ ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ದಿನಾಂಕಃ 06.12.2023 ರಂದು ವಿವರವಾದ ಹೇಳಿಕೆಯನ್ನು ಪೊಲೀಸರ ಮುಂದೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಹಲ್ಲಗಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ ಆರ್ ಎಂ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

## ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.